# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 | ENGLISH DAILY | Subscription Yearly - Rs. - | WEDNESDAY | 3-8-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ 5 ಶೇಕಡಾ ಇಳಿಕೆ

ಇಂಡೋನೇಶಿಯಾ ತನ್ನ ಪಾಮೆಣ್ಣೆ ರಫ್ತು ಕೋಟಾ ಹೆಚ್ಚಳಗೊಳಿಸಿದ್ದರಿಂದ ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ 5 ಶೇಕಡಾ ಇಳಿಕೆಯಾಗಿದ್ದು, ಹಿಂದಿನ ವಾರದಲ್ಲಿ ಏರಿಕೆಯಾದ ದರ ಈಗ ಇಳಿಕೆಯಾಗಿದೆ. ಸೋಯಾಬೀನ್ ಎಣ್ಣೆ ಫ್ಯೂಚರ್ ದರವೂ ಸ್ವಲ್ಪ ಇಳಿಕೆ ಕಂಡಿದೆ.

## ಸಕ್ಕರೆ ದರ ಹೆಚ್ಚಳ ತಾತ್ಕಲಿಕ

ಆಗಸ್ಟ್ ತಿಂಗಳ ಸಕ್ಕರೆ ಮಾರಾಟ ಕೋಟಾ ಪ್ರಕಟಣೆಯ ನಂತರ ಹಿಂದಿನೆರಡು ದಿನಗಳಿಂದ ಸಕ್ಕರೆ ದರ ಕ್ವಿಂಟಾಲಿಗೆ ರೂ. 100 ರ ಸಮೀಪ ಹೆಚ್ಚಳ ಕಂಡಿದೆ. ಈಗಿನ ಹೆಚ್ಚಳ ತಾತ್ಕಲಿಕವೆನ್ನಲಾಗಿದ್ದು, ಹಿಂದಿನ ದಿನಗಳಲ್ಲಿ ಹೆಚ್ಚಿನ ಮಳೆಯಿಂದ ಸರಬರಾಜು(ಸಾಗಾಣಿಕೆ) ಮಾಡಲಾಗದ ಕಾರಣ ಉಳಿಕೆಯಾದ ಹಿಂದಿನ ತಿಂಗಳ ಕೋಟಾಕ್ಕೆ ಆಗಸ್ಟ್ ಸಾಕಷ್ಟಿದ್ದು, ಮಿಲ್‌ಗಳಲ್ಲಿ ದಾಸ್ತಾನು ಸಾಕಷ್ಟಿರುವುದರಿಂದ ಈಗ ಹೆಚ್ಚಳವಾಗಿರುವ ದರ ತಾತ್ಕಲಿಕವಾಗಬಹುದಾಗಿದ್ದು ಹೆಚ್ಚಳವಾದ ದರ ಇಳಿಕೆಯಾಗುವ ಸಾಧ್ಯತೆ ಹೆಚ್ಚು.

## ಭತ್ತ ಬಿತ್ತನೆ ಮಂದಗತಿ ಹಾಗೂ ಸಾಮಾನ್ಯಕ್ಕಿಂತ ಕಡಿಮೆ

ಈ ವರ್ಷ ಮಳೆಯ ವ್ಯತ್ಯಯದಿಂದ ಭತ್ತ ಬಿತ್ತನೆ ಮಂದಗತಿಯಲ್ಲಿ ಸಾಗುತ್ತಿದ್ದು ಹಿಂದಿನ ವರ್ಷ ಈ ಅವಧಿಯಲ್ಲಿ ಬಿತ್ತನೆಯಾದ ಪ್ರದೇಶಕ್ಕಿಂತ ಗಣನೀಯ ಕಡಿಮೆ ಪ್ರದೇಶದಲ್ಲಿ ಭತ್ತ ಬಿತ್ತನೆಯಾಗಿದೆ. ಮುಂದಿನ ದಿನಗಳಲ್ಲಿ ಬಿತ್ತನೆ ಪ್ರದೇಶದಲ್ಲಿ ಪ್ರಗತಿಯಾಗಬಹುದಾದರೂ ಸಾಮಾನ್ಯ ಬಿತ್ತನೆಯಾಗುವ ಮಟ್ಟ ಹಾಗೂ ಹಿಂದಿನ ವರ್ಷದ ಮಟ್ಟ ತಲುಪುದ ಸಾಧ್ಯತೆ ಕಡಿಮೆ. ಇದರಿಂದ ಖಾರೀಫ್ ಭತ್ತ ಉತ್ಪಾದನೆ ಇಳಿಕೆಯಾಗುವ ಸಾಧ್ಯತೆಯಿದ್ದು, ಭತ್ತ ಹಾಗೂ ಅಕ್ಕಿ ದರ ಹೆಚ್ಚಳವಾಗುವ ಸಾಧ್ಯತೆಗಳಿವೆ.